ಪಿ.ಡಬ್ಲ್ಯೂ:1

ದಿನಾಂಕ :01-04-2023 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ ಪಿ ಎಂ ಪಿ ವಕೀಲರಿಂದಃ

ಪ್ರತಿವಾದಿಯರು ನನಗೆ 15 ವರ್ಷಗಳಿಂದ ಪರಿಚಯ. 1 ನೇ ಪ್ರತಿವಾದಿಯ ಗಂಡ ನನಗೆ ಪರಿಚಯಸ್ಥರು ಇದ್ದು, ವಿಶ್ವಾಸಿಗರು ಅಂದರೆ ಸರಿ. 1 ನೇ ಪ್ರತಿವಾದಿಯ ಗಂಡನಿಗೆ ಒಟ್ಟು ಎಷ್ಟು ಆಸ್ತಿ ಇತ್ತು ಗೊತ್ತಿಲ್ಲ. ಅವರಿಗೆ ಚೇಳೂರಿನಲ್ಲಿ 10 ಎಕರೆ ಆಸ್ತಿ ಇತ್ತು ಅಂದರೆ ಇರಬಹುದು. ಅವರ ಆಸ್ತಿಯಲ್ಲಿ ತೆಂಗು, ಅಡಿಕೆ, ಬಾಳೆ ಬೆಳೆದಿದ್ದಾರೆ ಅಂದರೆ ಗೊತ್ತಿಲ್ಲ. ನಟರಾಜು ಬದುಕಿದಾಗ ಯಾವುದೇ ಆಸ್ತಿ ಮಾರಾಟ ಮಾಡಿಲ್ಲ ಅಂದರೆ ಸರಿ. ನಟರಾಜು ರವರ ಆಸ್ತಿಯಿಂದ ವರ್ಷಕ್ಕೆ 10 ಲಕ್ಷ ರೂ. ಆದಾಯ ಇತ್ತು ಅಂದರೆ ಗೊತ್ತಿಲ್ಲ. ನಟರಾಜು ಬದುಕಿದ್ದಾಗ ತಮ್ಮ ಜಮೀನು ಅಭಿವೃದ್ದಿಗಾಗಿ ಬ್ಯಾಂಕಿನಲ್ಲಿ ಸಾಲ ತೆಗೆದಿದ್ದರು ಅಂದರೆ ನನಗೆ ಗೊತ್ತಿಲ್ಲ. ದಾವಾಸ್ತಿಯ ಮೇಲಿಯೂ ಸಹ ನಟರಾಜು ಬದುಕಿದಾಗ ಬ್ಯಾಂಕಿನಿಂದ ಸಾಲ ತೆಗೆದ ಬಗ್ಗೆ ಕಂದಾಯ ದಾಖಲೆಯಲ್ಲಿ ಷರಾ ಇತ್ತು ಅಂದರೆ ನನಗೆ ಗೊತ್ತಿಲ್ಲ. ನಟರಾಜು ಬದುಕಿರುವಾಗ ಆ ಎಲ್ಲಾ ಸಾಲಗಳನ್ನು ತೀರಿಸಿದ್ದರು ಅಂದರೆ ನನಗೆ ಗ್ತೊತ್ತಿಲ್ಲ. ನನಗೆ ಅವರು ವಿಶ್ವಾಸಿಗರು ಆದ ಕಾರಣ ಎಲ್ಲಾ ವಿಷಯ ಗೊತ್ತಿದ್ದರೂ ಗೊತ್ತಿಲ್ಲ ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಟರಾಜು ಮೃತಪಟ್ಟ ನಂತರ ಅವರ ಹೆಂಡತಿ ಸುಜಾತ ಈ ಎಲ್ಲಾ ಆಸ್ತಿಗಳನ್ನು ನೋಡಿಕೊಳ್ಳುತ್ತಿದ್ದಾರೆ ಅಂದರೆ ಸರಿ. ಈಗಲೂ ಸಹ ಸದರಿ ಆಸ್ತಿಗಳಿಂದ ಪ್ರತಿ ವರ್ಷ 10 ಲಕ್ಷ ಕ್ಕೂ ಹೆಚ್ಚು ಆದಾಯ ಬರುತ್ತಿದೆ ಅಂದರೆ ನನಗೆ ಗೊತ್ತಿಲ್ಲ. ನಾನು ಕಲ್ಲೂರಿನಲ್ಲಿ ವಾಸ ಇದ್ದೇನೆ. ನಾನು ಎಲೆಕ್ಟ್ರೀಕಲ್ ಕೆಲಸ ಮಾಡುತ್ತೇನೆ. ನನಗೆ ಕಲ್ಲೂರಿನಲ್ಲಿ ಸುಮಾರು ಆಸ್ತಿಗಳಿವೆ ಅಂದರೆ ಸರಿ. ದಾವಾಸ್ತಿ ಚೇಳೂರಿನಲ್ಲಿ ಇದೆ ಅಂದರೆ ಸರಿ. ನಮ್ಮ ಊರಿನಿಂದ ಚೇಳೂರಿಗೆ 40 ಕಿ ಮೀ ದೂರ ಇದೆ. ಅಷ್ಟು ದೂರದಿಂದ ಅಲ್ಲಿಗೆ ಹೋಗಿ ವ್ಯವಸಾಯ ಮಾಡಿಸಲು ಆಗುವುದಿಲ್ಲ ಅಂದರೆ ಮಾಡಬಹುದು ಅಂತ ಹೇಳುತ್ತಾರೆ. ದಾವಾಸ್ತಿ ರಸ್ತೆ ಪಕ್ಕದಲ್ಲಿದೆ ಅಂದರೆ ಸರಿ. ಅದರಲ್ಲಿ ಯಾವುದೇ ತೆಂಗು, ಅಡಿಕೆ ಬೆಳೆ ಇಲ್ಲ ಅಂದರೆ ಸರಿ. ಅದು ರಸ್ತೆ ಪಕ್ಕದಲ್ಲಿರುವುದರಿಂದ ಅದನ್ನು ವಾಣಿಜ್ಯ ಉದ್ದೇಶಕ್ಕಾಗಿ ವರ್ಗಾವಣೆ ಮಾಡುವ ಉದ್ದೇಶ ಹೊಂದಿದ್ದರು ಅಂದರೆ ಸರಿ. ಅದು ಪಹಣಿಯಲ್ಲಿ ಬ್ಯಾಂಕಿನಲ್ಲಿ ಸಾಲ ಅಂತ ಇರುವುದನ್ನು ತೆಗೆಸಿದರೇ ಮಾತ್ರ ಅಲಿನೇಷನ್ ಮಾಡಬಹುದು ಅಂದರೆ ಸರಿ. ನಾನು ನಟರಾಜು ರವರಿಗೆ ತುಂಬಾ ಪರಿಚಯಸ್ಥನಾಗಿದ್ದರಿಂದ ಸುಜಾತ ರವರು ಪಹಣಿಯಲ್ಲಿ ಸಾಲ ಅಂತ ಇರುವುದನ್ನು ತೆಗೆಸಿ ಕೊಡಿ ಅಂತ ನನಗೆ ಹೇಳಿದ್ದರು ಅಂದರೆ ಸುಳ್ಳು. ಪಹಣಿಯಲ್ಲಿ ಸಾಲ ಅಂತ ಇರುವುದನ್ನು ತೆಗೆಸಲು ಉಪ

ನೊಂದಾಣಾಧಿಕಾರಿಯ ಕಚೇರಿಗೆ ಬರಲು ನಾನು ಸುಜಾತ ರವರಿಗೆ ತಿಳಿಸಿದ್ದೆ ಅಂದರೆ ಸರಿಯಲ್ಲ. ಈ ಅಡಮಾನ ಇರುವುದನ್ನು ತೆಗೆಸಲು ಅವರು ಉಪ ನೊಂದಣಿ ಕಚೇರಿಗೆ ಅವರ ಮಕ್ಕಳ ಜೊತೆ ಬಂದಿದ್ದರು ಅಂದರೆ ಸುಳ್ಳು. ಕಂದಾಯ ದಾಖಲೆಯಲ್ಲಿರುವ ಅಡಮಾನ ಷರಾ ವನ್ನು ತೆಗೆಸಿ ಹಾಕಲು ಸಹಿ ಮಾಡಿ ಅಂತ ನಾನು ನಿಪಿ-1 ಕ್ಕೆ ಅವರ ಸಹಿಯನ್ನು ತೆಗೆದುಕೊಂಡಿದ್ದೇನೆ ಅದು ಕ್ರಯ ಕರಾರು ಪತ್ರ ಅಂತ ಸುಳ್ಳು ಸೃಷ್ಟಿ ಮಾಡಿದ್ದೇನೆ ಅಂದರೆ ಸರಿಯಲ್ಲ. ಅದು ಅಡಮಾನ ಷರಾ ತೆಗೆಸಿ ಹಾಕಲು ಅಂತ ನಾನು ಸುಳ್ಳು ಹೇಳಿ ಅವರಿಂದ ನಿಪಿ-1 ಕ್ಕೆ ಸಹಿ ತೆಗೆದುಕೊಂಡಿದ್ದೇನೆ ಅಂದರೆ ಸರಿಯಲ್ಲ. ಜಗನ್ನಾಥ ಎನ್ನುವವರು ದಾವಾಸ್ತಿಯನ್ನು ಮಾರಾಟ ಮಾಡುತ್ತಾರೆ ಅಂತ ತಿಳಿಸಿದ್ದು ಅವರ ಜೊತೆ ನಾನು ಹೋಗಿದ್ದೆ ಅಂತ ಹೇಳುತ್ತಾರೆ. ನೊಂದಣಿಯಾಗುವ 15 ದಿವಸದ ಮೊದಲು ನಾನು ಹೋಗಿದ್ದೆ. ದಾವಾಸ್ತಿಯನ್ನು ಕೊಂಡುಕೊಳ್ಳಲು ಪ್ರತಿವಾದಿಯರ ಮನೆಯಲ್ಲಿ ಮಾತುಕತೆ ಯಾಗಿದೆ. ಮಾತುಕತೆಯಾಗಿ 15 ದಿವಸದ ನಂತರ ನಿಪಿ-1 ನೊಂದಣಿಯಾಗಿದೆ. ಉಪ ನೊಂದಣಿ ಕಚೇರಿಗೆ ನಾವು ಬೆಳಿಗ್ಗೆ 11-00 ಗಂಟೆಗೆ ಹೋಗಿದ್ದೇವು. ಪ್ರತಿವಾದಿಯರು ಬೆಳಿಗ್ಗೆ 11-00 ಗಂಟೆಗೆ ಬಂದಿದ್ದರು. ನಿಪಿ-1 ಕ್ಕೆ ಬಾಂಡನ್ನು ನಾನೇ ತಂದಿದ್ದೇನೆ ಅಂದರೆ ಸರಿ. ನಿಪಿ-1 ನ್ನು ವಿಶ್ವನಾಥ ಸ್ಟಾಂಪ್ ವೆಂಡರ್ ಜೊತೆ ಬರೆಸಿದ್ದೇವೆ. ಸದರಿ ವಿಶ್ವನಾಥ ನನಗೆ ಪರಿಚಯಸ್ಥರಲ್ಲ. ಸದರಿ ನಿಪಿ-1 ನ್ನು ಅದೇ ದಿನ ಬೆಳಿಗ್ಗೆ 11-00 ಗಂಟೆಗೆ ನಾವು ಹೋಗುವಷ್ಟರಲ್ಲಿ ಬರೆದು ಇಟ್ಟಿದ್ದರು. ನಾನು ನನ್ನ ಕಡೆ ರಮೇಶ, ಪ್ರತಿವಾದಿಯರು ಇದ್ದರು. ನಿಪಿ-1 ಕ್ಕೆ ಸುಜಾತ ಅವರ ಮಕ್ಕಳು, ರಮೇಶ, ನಾನು ಸ್ಟಾಂಪ್ ವೆಂಡರ್ ಸಹಿ ಮಾಡಿದ್ದೇವೆ. ನೊಂದಣಿಯನ್ನು ಅದೇ ದಿನ ಮದ್ಯಾಹ್ನ 2-30 ಗಂಟೆಗೆ ಮಾಡಿಸಿದ್ದೇನೆ. ನಿಪಿ-1 ನ್ನು ನೊಂದಣಿ ಮಾಡುವಾಗಲೂ ಸಹ ಅದೇ ಸಾಕ್ಷಿದಾರರು ಇದ್ದರು. ನಿಪಿ-1 ರಲ್ಲಿ ಬರೆದಿರುವ ಚೆಕ್ ಅದೇ ದಿನ ಕೊಟ್ಟಿದ್ದೇನೆ. ಆ ಚೆಕ್ ಹರಿದು ಹೋಗಿದೆ ಅಂತ ನಿಪಿ-1 ನೊಂದಣಿ ಯಾಗಿ 8-10 ದಿವಸದ ನಂತರ ತಂದು ಕೊಟ್ಟಿದ್ದಾರೆ. ನಾನು ಅವರಿಗೆ ಯಾವುದೇ ಚೆಕ್ ಕೊಟ್ಟಿಲ್ಲ, ಅವರು ಅದನ್ನು ನಮಗೆ ಹಿಂತಿರುಗಿ ತಂದು ಕೊಟ್ಟಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ-1 ನ್ನು ನಾನೇ ಬರೆಯಿಸಿ ತಯಾರು ಮಾಡಿ ಪ್ರತಿವಾದಿಯವರಿಗೆ ಸುಳ್ಳು ಹೇಳಿ ಅವರ ಸಹಿ ತೆಗೆದುಕೊಂಡು ಸುಳ್ಳು ದಾಖಲೆ ಸೃಷ್ಟಿ ಮಾಡಿದ್ದೇನೆ ಅಂದರೆ ಸರಿಯಲ್ಲ. ಹರಿದು ಹೋಗಿದೆ ಅಂತ ಚೆಕ್ ಹಿಂತಿರುಗಿ ಕೊಟ್ಟಾಗ ನಾನು ಯಾವುದೇ ಷರಾ ಬರೆಸಿಕೊಟ್ಟಿಲ್ಲ. ನಾನು ಆ ಚೆಕ್ಕನ್ನು ತೆಗದುಕೊಂಡು ಒಂದು ತಿಂಗಳ ನಂತರ ಮತ್ತೆ ಬೇರೆ ಚೆಕ್ಕನ್ನು ಕೊಟ್ಟಿದ್ದೇನೆ. ನಾನು ಮೊದಲಿನ ಚೆಕ್ಕನ್ನು ಹಿಂಪಡೆದು, ಮತ್ತೆ ಹೊಸ ಚೆಕ್ಕನ್ನು ಕೊಟ್ಟಿದ್ದೇನೆ ಅನ್ನುವುದಕ್ಕೆ ಯಾವುದೇ ಹಿಂಬರಹ ಬರೆಸಿಕೊಂಡಿಲ್ಲ.

(ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ಸಮಯ

ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
( ಉಂಡಿ ಮಂಜುಳ ಶಿವಪ್ಪ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ.